## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2156 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 18.03.2022. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ K.D.P ಸಭೆಗೆ ಅಧ್ಯಕ್ಷರು ಯಾರಾಗಿರುತ್ತಾರೆ; K.D.P ಸಭೆಯ ಮಾರ್ಗಸೂಚಿಗಳು ಯಾವುವು; | ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ K.D.P ಸಭೆಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಅಧ್ಯಕ್ಷರಾಗಿರುತ್ತಾರೆ.<br><br>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 479 ಗ್ರಾಪಂಅ 2019, ದಿನಾಂಕ:11-06-2019 ರಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (ಕೆ.ಡಿ.ಪಿ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಆದೇಶದ ಪ್ರತಿಯನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಪ್ರತಿ ಗ್ರಾಮ ಪಂಚಾಯತಿಯ K.D.P ಸಭೆಗೆ ಬರುವ ಅಧಿಕಾರಿಗಳು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗಿಂತ ಮೇಲ್ದರ್ಜೆ/ಕೆಳದರ್ಜೆಯವರಗಿರುತ್ತಾರೆಯೇ; ಮತ್ತು ಈ ಸಭೆಗೆ ಹಾಜರಿರಬೇಕಾಗಿರುವ ಇಲಾಖೆಗಳು ಯಾವುವು; | ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (ಕೆ.ಡಿ.ಪಿ) ಸಭೆಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಎಲ್ಲಾ ಅಭಿವೃದ್ಧಿ ಇಲಾಖೆಗಳ ಹೋಬಳಿ/ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿ/ ಸಿಬ್ಬಂದಿಗಳು ಹಾಜರಿರಬೇಕಾಗಿರುತ್ತದೆ.<br><br>ಈ ಸಭೆಗೆ ಕೃಷಿ, ತೋಟಗಾರಿಕೆ, ರೇಷ್ಮೆ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಆರೋಗ್ಯ, ಪಶುಸಂಗೋಪನೆ / ಹೈನುಗಾರಿಕೆ, ಮೀನುಗಾರಿಕೆ, ಸಾಮಾಜಿಕ ಅರಣ್ಯ, ಸಣ್ಣ ನೀರಾವರಿ, ಇಂಧನ, ಆಹಾರ ಮತ್ತು ನಾಗರೀಕ ಸರಬರಾಜು, ಕಂದಾಯ, ಪ್ರವಾಸೋದ್ಯಮ, ವಾಣಿಜ್ಯ ಮತ್ತು ಕೈಗಾರಿಕೆ, ಖಾದಿ ಮತ್ತು ಗ್ರಾಮೋದ್ಯೋಗ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ, ಸಹಕಾರ ಇಲಾಖೆಗಳು ಹಾಜರಿರಬೇಕಾಗಿದೆ. |
| (ಇ) | ಈ ಹಿಂದೆ ಸರ್ಕಾರ ಗ್ರಾಮ ಪಂಚಾಯತಿ ಮಟ್ಟದಲ್ಲಿ K.D.P ಸಭೆಗಳನ್ನು ಪರಿಣಾಮಕಾರಿಯಾಗಿ ನಡೆಸಲು ಆದೇಶಿಸಿದ್ದರೂ, ಇಂದು ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು ನಿರಾಸಕ್ತಿಯಿಂದ ಗ್ರಾಮ ಪಂಚಾಯಿತಿ ಮಟ್ಟದ K.D.P ಸಭೆಗಳು ನೆಪ ಮಾತ್ರಕ್ಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿಲ್ಲ. |

| | | |
|---|---|---|
| (ಈ) | ಗ್ರಾಮ ಪಂಚಾಯಿತಿ ಮಟ್ಟದ K.D.P ಸಭೆಗಳು ಪರಿಣಾಮಕಾರಿಯಾಗಿ ನಡೆದು, ಸಮಗ್ರ ಗ್ರಾಮೀಣಾಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸಲು ಸರ್ಕಾರದ ಕೈಗೊಂಡ ಕ್ರಮಗಳೇನು? | ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (ಕೆ.ಡಿ.ಪಿ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಲು ಸಮಿತಿ ರಚನೆ ಮಾಡಲಾಗಿದ್ದು, ಅದರಂತೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಪರಿಶೀಲನೆ ಮತ್ತು ಮೇಲ್ವಿಚಾರಣೆ ಮಾಡುವರು. |

ಸಂ. ಗ್ರಾಅಪ 126 ಗ್ರಾಪಂಅ 2022

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಅನುಬಂಧ

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಗ್ರಾಮ ಪಂಚಾಯತ್ ಮಟ್ಟದಲ್ಲಿ ಸಮಿತಿ ರಚನೆ ಕುರಿತು.

ಪ್ರಸ್ತಾವನೆ:

ಸಂವಿಧಾನದ 73 ನೇ ತಿದ್ದುಪಡಿಯ ಆಶೋತ್ತರಗಳಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದ ಅನುದಾನ ಚಟುವಟಿಕೆ ಹಾಗೂ ಅಧಿಕಾರಿಗಳನ್ನು ಮೂರು ಸ್ಥರದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲಾಗಿರುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಅಭಿವೃದ್ಧಿ ಯೋಜನೆಗಳಡಿ ಬಿಡುಗಡೆಗೊಳಿಸುತ್ತಿರುವ ಅನುದಾನಗಳನ್ನು ಸಮರ್ಪಕವಾಗಿ ಬಳಸಿಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿವೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 309 ಮತ್ತು 310ರ ಅನ್ವಯ ಸರ್ಕಾರವು, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಕ್ರಿಯಾ ಯೋಜನೆಯ ಕರಡನ್ನು ಸಿದ್ಧಪಡಿಸಲು ಪ್ರತಿಯೊಂದು ಜಿಲ್ಲೆಗೂ ಒಂದೊಂದು ಜಿಲ್ಲಾ ಯೋಜನಾ ಸಮಿತಿ, ಪ್ರತಿ ತಾಲ್ಲೂಕಿಗೂ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗಳನ್ನು ಈಗಾಗಲೇ ರಚಿಸಿದೆ. ಜೊತೆಗೆ, ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದಡಿ (20 ಅಂಶ ಕಾರ್ಯಕ್ರಮವು ಸೇರಿದಂತೆ) ಸಾಧಿಸಿದ ಪ್ರಗತಿಯನ್ನು ಪರಿಶೀಲಿಸಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಮಾನ್ಯ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶ ಕಾರ್ಯಕ್ರಮವು ಸೇರಿದಂತೆ) ಪ್ರಗತಿ ಪರಿಶೀಲನಾ ಸಮಿತಿಗಳನ್ನು ಈಗಾಗಲೇ ರಚಿಸಿದೆ.

ಬಡತನ ನಿರ್ಮೂಲನೆ, ಮಕ್ಕಳ ಮತ್ತು ಗರ್ಭಿಣಿಯರ ಆರೋಗ್ಯಕ್ಕಾಗಿ ಪೌಷ್ಠಿಕಾಂಶ ಒದಗಿಸುವ ಕಾರ್ಯಕ್ರಮಗಳ ಅನುಷ್ಠಾನ, ಮಕ್ಕಳ ಮತ್ತು ಮಹಿಳೆಯರ ಆರೋಗ್ಯ, ಶೈಕ್ಷಣಿಕ, ಕಾರ್ಯಕ್ರಮಗಳ ಅನುಷ್ಠಾನ ಮತ್ತು ಪಡಿತರ ಧಾನ್ಯಗಳ ಸಮರ್ಪಕ ವಿತರಣೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಾರ್ಯನಿರ್ವಹಣೆ, ಪಶುಪಾಲನ ಚಿಕಿತ್ಸಾ ಕೇಂದ್ರಗಳ ಕಾರ್ಯನಿರ್ವಹಣೆ, ಗ್ರಾಮ ಪಂಚಾಯತಿ ಹಂತದಲ್ಲಿನ ವಿವಿಧ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಮತ್ತು ತರಗತಿಗಳ ನಿರ್ವಹಣೆಯ ಬಗ್ಗೆ, ಕೃಷಿ ತೋಟಗಾರಿಕೆ ಮತ್ತು ರೇಷ್ಮೆ ಮತ್ತು ಸಂಬಂಧಪಟ್ಟ ಇತರೆ ಇಲಾಖೆಯ ಕಾರ್ಯಚಟುವಟಿಕೆಗಳ ಅನುಷ್ಠಾನ ಹಾಗೂ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸುವ ಬಗ್ಗೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶ ಕಾರ್ಯಕ್ರಮವು ಸೇರಿದಂತೆ) ಪ್ರಗತಿ ಪರಿಶೀಲನಾ ಸಮಿತಿಯನ್ನು ರಚಿಸಲು ಸರ್ಕಾರವು ತೀರ್ಮಾನಿಸಿದೆ.

ಈ ಸಮಿತಿಗೆ ಹೋಬಳಿ ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಎಲ್ಲಾ ಅಭಿವೃದ್ಧಿ ಇಲಾಖೆಗಳ ಸ್ಥಳೀಯ ಅಧಿಕಾರಿ/ಸಿಬ್ಬಂದಿಗಳಿಂದ ಅವರುಗಳಿಗೆ ಸಂಬಂಧಿಸಿದ ಯೋಜನೆ ಮತ್ತು ಅನುದಾನದ ವಿವರಗಳನ್ನು ಹಾಗೂ ಇವುಗಳ ಅನುಷ್ಠಾನದಲ್ಲಿ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸಲು ಹಾಗೂ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಸೂಕ್ತ ಮಾರ್ಗದರ್ಶನ ನೀಡುವ ಉದ್ದೇಶವನ್ನು ಸರ್ಕಾರವು ಹೊಂದಿರುತ್ತದೆ. ಆದ್ದರಿಂದ, ಗ್ರಾಮ ಪಂಚಾಯತಿ ಮಟ್ಟದಲ್ಲಿ ತ್ರೈಮಾಸಿಕ ಪರಿಶೀಲನಾ ಸಮಿತಿಯ ಸಭೆ ನಡೆಸುವುದು ಅತ್ಯವಶ್ಯಕವಾಗಿದೆ.

ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 479 ಗ್ರಾಪಂಅ 2019, ದಿನಾಂಕ: 11-06-2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ಪ್ರತಿಯೊಂದು ಗ್ರಾಮ ಪಂಚಾಯತಿ ಮಟ್ಟದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶ ಕಾರ್ಯಕ್ರಮವು ಸೇರಿದಂತೆ) ಪ್ರಗತಿ ಪರಿಶೀಲನಾ ಸಮಿತಿಯನ್ನು ಈ ಕೆಳಕಂಡಂತೆ ರಚಿಸಿ ಆದೇಶಿಸಲಾಗಿದೆ.

| | | |
|---|---|---|
| 1 | ಅಧ್ಯಕ್ಷರು: ಗ್ರಾಮ ಪಂಚಾಯತ್ | ಅಧ್ಯಕ್ಷರು |
| 2 | ಉಪಾಧ್ಯಕ್ಷರು: ಗ್ರಾಮ ಪಂಚಾಯತ್ | ಉಪಾಧ್ಯಕ್ಷರು |
| 3 | ಗ್ರಾಮ ಪಂಚಾಯತಿಯ ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳು | ಸದಸ್ಯರು |
| 4 | ಪಂಚಾಯತ್ ಅಭಿವೃದ್ಧಿ ಅಧಿಕಾರಿ | ಸದಸ್ಯ ಕಾರ್ಯದರ್ಶಿ |
| | ಇಲಾಖೆಗಳು | ಆಹ್ವಾನಿತರು (ಹೋಬಳಿ / ಗ್ರಾಮ ಪಂಚಾಯತಿ ಮಟ್ಟದ ಅಧಿಕಾರಿ / / ಸಿಬ್ಬಂದಿಗಳು) |
| 5 | ಕೃಷಿ | ಸಹಾಯಕ ಕೃಷಿ ಅಧಿಕಾರಿ/ ಕೃಷಿ ಸಹಾಯಕರು |
| 6 | ತೋಟಗಾರಿಕೆ | ಸಹಾಯಕ ತೋಟಗಾರಿಕೆ ಅಧಿಕಾರಿ / ತೋಟಗಾರಿಕೆ ಸಹಾಯಕ |
| 7 | ರೇಷ್ಮೆ | ರೇಷ್ಮೆ ವಿಸ್ತರಣಾಧಿಕಾರಿ/ರೇಷ್ಮೆ ನಿರೀಕ್ಷಕರು |
| 8 | ಶಿಕ್ಷಣ | ಸಂಬಂಧಿತ ಶಾಲಾ ಮುಖ್ಯೋಪಾಧ್ಯಾಯರು |
| 9 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | ಸಂಬಂಧಿತ ಅಂಗನವಾಡಿ ಮೇಲ್ವಿಚಾರಕರು/ ಕಾರ್ಯಕರ್ತೆಯರು |
| 10 | ಆರೋಗ್ಯ | ANM/ಆಶಾ ಕಾರ್ಯಕರ್ತೆಯರು |
| 11 | ಪಶುಸಂಗೋಪನೆ/ಹೈನುಗಾರಿಕೆ | ಪಶು ಸಂಗೋಪನೆ ನಿರೀಕ್ಷಕರು |
| 12 | ಮೀನುಗಾರಿಕೆ | ಸಂಬಂಧಿಸಿದ ಕ್ಷೇತ್ರಮಟ್ಟದ ಮೀನುಗಾರಿಕೆ ಅಧಿಕಾರಿ/ಸಿಬ್ಬಂದಿ |
| 13 | ಸಾಮಾಜಿಕ ಅರಣ್ಯ | ಗ್ರಾಮ ಪಂಚಾಯತಿ ವ್ಯಾಪ್ತಿಯ ಅರಣ್ಯ ಅಧಿಕಾರಿ/ಸಿಬ್ಬಂದಿ |

| | | |
|---|---|---|
| 14 | ಸಣ್ಣ ನೀರಾವರಿ | ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿ / ಕೆರೆ ಅಭಿವೃದ್ಧಿ ನಿರ್ವಹಣಾ ಸಮಿತಿ ಅಧ್ಯಕ್ಷರು |
| 15 | ಗ್ರಾಮೀಣ ರಸ್ತೆ/ಸೇತುವೆ | ಸಂಬಂಧಪಟ್ಟ ಕಿರಿಯ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ |
| 16 | ಗ್ರಾಮೀಣ ವಿದ್ಯುದೀಕರಣ/ವಿದ್ಯುಚ್ಛಕ್ತಿ ಮತ್ತು ಇಂಧನ | ಕ್ಷೇತ್ರಮಟ್ಟದ ಎಸ್ಕಾಂ ಸಿಬ್ಬಂದಿ |
| 17 | ಆಹಾರ ಮತ್ತು ನಾಗರೀಕ ಸರಬರಾಜು | ಆಹಾರ ನಿರೀಕ್ಷಕರು / ಪ್ರತಿನಿಧಿಸುವ ಸಿಬ್ಬಂದಿ ಮತ್ತು ನ್ಯಾಯ ಬೆಲೆ ಅಂಗಡಿ ಮಟ್ಟದ ಸಮಿತಿ ಅಧ್ಯಕ್ಷರು |
| 18 | ಕಂದಾಯ | ಗ್ರಾಮ ಲೆಕ್ಕಿಗರು |
| 19 | ಪ್ರವಾಸೋದ್ಯಮ | ಪ್ರವಾಸಿ ಸ್ಥಳ ಇದ್ದ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಪಟ್ಟ ಅಧಿಕಾರಿಗಳು / ಪ್ರತಿನಿಧಿ ಮಾತ್ರ ಮಾಹಿತಿ ನೀಡುವುದು. |
| 20 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆ. | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆ ಅಧಿಕಾರಿಯಿಂದ ನಿಯೋಜಿಸಲ್ಪಡುವ ಸಿಬ್ಬಂದಿ / ಜವಳಿ ನಿರೀಕ್ಷಕರು. |
| 21 | ವಸತಿ | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ |
| 22 | ಕುಡಿಯುವ ನೀರು ಪೂರೈಕೆ ಮತ್ತು ನೈರ್ಮಲ್ಯ | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಉಪವಿಭಾಗದ ಇಂಜಿನಿಯರ್ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿ |
| 23 | ಬಡತನ ನಿರ್ಮೂಲನೆ ಕಾರ್ಯಕ್ರಮಗಳು ಆದಾಯೋತ್ಪತ್ತಿ ಚಟುವಟಿಕೆಗಳು– ಸ್ವ–ಉದ್ಯೋಗ (ಎನ್.ಆರ್.ಎಲ್.ಎಮ್.) | ಪಂಚಾಯತ್ ಅಭಿವೃದ್ಧಿ ಅಧಿಕಾರಿ |
| 24 | ಕ್ರೀಡೆಗಳು ಮತ್ತು ಸಾಂಸ್ಕೃತಿಕ ಚಟುವಟಿಕೆ | ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಅಧಿಕಾರಿ ನಿಯೋಜಿಸುವ ಸಿಬ್ಬಂದಿ |
| 25 | ಕೃಷಿ ಉತ್ಪನ್ನ ಮಾರುಕಟ್ಟೆ | ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ನಿಯೋಜಿಸಲ್ಪಡುವ ಅಧಿಕಾರಿ/ ಸ್ಥಳೀಯ ಸಿಬ್ಬಂದಿ |
| 26 | ಸಹಕಾರ | ಸಂಬಂಧಪಟ್ಟ ಸಹಕಾರಿ/ಗ್ರಾಮೀಣ ಬ್ಯಾಂಕ್ ವಿಸ್ತರಣಾಧಿಕಾರಿ/ ಬ್ಯಾಂಕ್ ಮ್ಯಾನೇಜರ್ ನಿಯೋಜಿಸುವ ಅಧಿಕಾರಿ/ಸಿಬ್ಬಂದಿ |
| 27 | ಗ್ರಂಥಾಲಯ / ಜ್ಞಾನ ನಿರ್ವಹಣೆ | ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರು |

| | | |
|---|---|---|
| 28 | ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ | ಕಾರ್ಯದರ್ಶಿ |
| 29 | ಅಂಕಿ ಅಂಶಗಳ ನಿರ್ವಹಣೆ ಮತ್ತು ಯೋಜನೆ | ಸಂಬಂಧಪಟ್ಟ ಕ್ಷೇತ್ರ ಮಟ್ಟದ ಅಧಿಕಾರಿ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿ |
| 30 | ಗ್ರಾಮ ಪಂಚಾಯತಿ ನಿಯಮಾನುಸಾರ ಸೂಕ್ತವೆಂದು ಅಭಿಪ್ರಾಯಪಡುವ ಇತರ ಇಲಾಖೆಯ ಗ್ರಾಮ ಪಂಚಾಯತ್/ ಹೋಬಳಿ ಮಟ್ಟದ ಅಧಿಕಾರಿಗಳು/ ಸಿಬ್ಬಂದಿ | ಗ್ರಾಮ ಪಂಚಾಯತಿ ನಿರ್ಧರಿಸುವುದು |

**ಷರತ್ತು ಹಾಗೂ ನಿಬಂಧನೆಗಳು:**

- ಗ್ರಾಮ ಪಂಚಾಯತ್ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (ಕೆ.ಡಿ.ಪಿ) ಪರಿಶೀಲನಾ ಸಮಿತಿಯು ತ್ರೈಮಾಸಿಕವಾಗಿ ಏಪ್ರಿಲ್, ಜುಲೈ, ಅಕ್ಟೋಬರ್, ಡಿಸೆಂಬರ್ ತಿಂಗಳುಗಳ ಮೊದಲನೇ ವಾರದಲ್ಲಿ ಸಭೆ ಸೇರುವುದು.
- ಒಂದು ವೇಳೆ ಸದರಿ ಸಭೆಗೆ ಗ್ರಾಮ ಪಂಚಾಯತಿ ಅಧ್ಯಕ್ಷರು ಗೈರು ಹಾಜರಾದಲ್ಲಿ, ಗ್ರಾಮ-ಪಂಚಾಯತ್ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿಯು ಸಭೆ ನಡೆಸತಕ್ಕದ್ದು. ಈ ಇಬ್ಬರ ಗೈರು ಹಾಜರಿಯಲ್ಲಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆ ನಡೆಸತಕ್ಕದ್ದು.
- ಸದಸ್ಯ ಕಾರ್ಯದರ್ಶಿಗಳು ಪ್ರತಿ ತ್ರೈಮಾಸಿಕಕ್ಕೆ ಒಮ್ಮೆ ಕೆ.ಡಿ.ಪಿ. ಸಭೆಯನ್ನು ನಡೆಸಲು ಕ್ರಮ ವಹಿಸಬೇಕು.
- ಸಭೆಯ ದಿನಾಂಕವನ್ನು ಗ್ರಾಮ ಪಂಚಾಯತಿ ಅಧ್ಯಕ್ಷರಿಂದ ಪಡೆದು, ಒಂದು ವಾರ ಮುಂಚಿತವಾಗಿ ಸಮಿತಿಯ ಸದಸ್ಯರಿಗೆ ತಿಳುವಳಿಕೆ ಸೂಚನೆಯನ್ನು ನೀಡಬೇಕು.
- ಸಂಬಂಧಪಟ್ಟ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಹೋಬಳಿ/ಗ್ರಾಮ ಪಂಚಾಯತಿ ಮಟ್ಟದ ಅಧಿಕಾರಿ/ಸಿಬ್ಬಂದಿಗಳನ್ನು ಗ್ರಾಮ ಪಂಚಾಯಿತಿ ಕೆ.ಡಿ.ಪಿ. ಸಭೆಗೆ ಹಾಜರಾಗಲು ನಿರ್ದಿಷ್ಟಪಡಿಸಿ ಆದೇಶ ಹೊರಡಿಸುವುದು.
- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಗ್ರಾಮ ಪಂಚಾಯತಿಗಳು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಬಗ್ಗೆ ನಮೂನೆ-I ರಲ್ಲಿ ಮಾಹಿತಿ ಒದಗಿಸುವುದು.
- ಕೆ.ಡಿ.ಪಿ. ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳ ಪಟ್ಟಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.
- ಕೆ.ಡಿ.ಪಿ. ಸಭೆಗೆ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರಗಳನ್ನು ಪ್ರತ್ಯೇಕ ನಮೂನೆಯಲ್ಲಿ ನೀಡಲಾಗುವುದು.
- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯ ಷೆಡ್ಯುಲ್- IV (ಪ್ರತಿ ಲಗತ್ತಿಸಿದೆ) ರಲ್ಲಿರುವ ಅಂಶಗಳಡಿ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸುವುದು.

ಸಭೆಯ ನಂತರ ಸಭಾ ನಡವಳಿಗಳನ್ನು ಮೂರು ದಿನಗಳೊಳಗಾಗಿ ಸಿದ್ಧಪಡಿಸಿ ಸಂಬಂಧಪಟ್ಟ ಎಲ್ಲಾ ಸದಸ್ಯರಿಗೆ, ತಾಲ್ಲೂಕು ಮಟ್ಟದ ಇಲಾಖೆಯ ಮುಖ್ಯಸ್ಥರಿಗೆ, ಆಹ್ವಾನಿತರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಬೇಕು ಹಾಗೂ ಸಮಿತಿಯು ನೀಡಿದ ಸಲಹೆ ಸೂಚನೆಗಳ ಮೇಲೆ ಸಂಬಂಧಪಟ್ಟ ಹೋಬಳಿ / ಗ್ರಾಮ ಪಂಚಾಯತಿ ಮಟ್ಟದ ಅಧಿಕಾರಿಗಳು / ಸಿಬ್ಬಂದಿಗಳಿಂದ ಕೈಗೊಂಡ ಕ್ರಮದ ಅನುಪಾಲನಾ ವರದಿ ಪಡೆದು, ಮುಂದಿನ ಸಭೆಯಲ್ಲಿ ಮಂಡಿಸಿ ಚರ್ಚಿಸಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

ಈ ಆದೇಶವನ್ನು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ದಿನಾಂಕ:06-06-2019 ರ ಟಿಪ್ಪಣಿ ಸಂಖ್ಯೆ:ಪಿಡಿಎಸ್ 7 ಡಿಪಿಡಿ 2019 ರಲ್ಲಿ ನೀಡಿದ ಸಹಮತಿಯೊಂದಿಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

11/6/19

(ಕೆ.ಯಾಲಕ್ಕಿಗೌಡ)
ನಿರ್ದೇಶಕರು (ಪಂ.ರಾಜ್-1) ಹಾಗೂ
ಸರ್ಕಾರದ ಪದನಿಮಿತ್ತ ಜಂಟಿಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಗೆ:

1) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು,
2) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು,
3) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು. (ಈ ಆದೇಶದ ಪ್ರತಿಯನ್ನು ತಾಲ್ಲೂಕು ಮಟ್ಟದ ಎಲ್ಲಾ ಇಲಾಖಾಧಿಕಾರಿಗಳಿಗೆ ಕಳುಹಿಸಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆಯುವ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳು (ಕೆ.ಡಿ.ಪಿ.) ಪ್ರಗತಿ ಪರಿಶೀಲನಾ ಸಭೆಗೆ ಹೋಬಳಿ / ಗ್ರಾಮ ಪಂಚಾಯತಿ ಮಟ್ಟದ ಅಧಿಕಾರಿ / ನೌಕರರು ಹಾಜರಾಗಲು ತಿಳಿಸುವಂತೆ ಕೋರಿದೆ.)
4) ಎಲ್ಲಾ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿಗಳು.

ಪ್ರತಿ:

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4) ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬಹುಮಹಡಿ ಕಟ್ಟಡ, ಬೆಂಗಳೂರು.
5) ಎಲ್ಲಾ ಆಯುಕ್ತರು / ವ್ಯವಸ್ಥಾಪಕ ನಿರ್ದೇಶಕರುಗಳು / ನಿರ್ದೇಶಕರುಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6) ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
8) ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ.
9) ವಿಶೇಷ ಅಧಿಕಾರಿ (ಜಿ.ಪಂ.) ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
10) ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
11) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

D : Grama Panchayat – KDP - G.O.

# ನಮೂನೆ – I

## 2019-20 ನೇ ಸಾಲಿನಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದಡಿ ಸಾಧಿಸಿರುವ ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರಗಳು

ಗ್ರಾಮ ಪಂಚಾಯತ್ ಹೆಸರು : ____________________

____________________ ಮಾಹೆಯ ಅಂತ್ಯದವರೆಗೆ

| ಕ್ರ. ಸಂ. | ಯೋಜನೆಯ ಹೆಸರು | ಆರ್ಥಿಕ ಪ್ರಗತಿ (ರೂ. ಲಕ್ಷಗಳಲ್ಲಿ) | | ಭೌತಿಕ ಪ್ರಗತಿ (ಸಂಖ್ಯೆಗಳಲ್ಲಿ) | | * ಷರಾ |
|---|---|---|---|---|---|---|
| | | ಲಭ್ಯವಿರುವ ಅನುದಾನ | ಸಾಧಿಸಿರುವ ಪ್ರಗತಿ | ಗುರಿ | ಸಾಧನೆ | |
| 1 | ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ | | | | | |
| 2 | ಸ್ವಚ್ಛ ಭಾರತ್ ಅಭಿಯಾನ | | | | | |
| 3 | ಗ್ರಾಮ ಪಂಚಾಯತಿ ಶಾಸನಬದ್ಧ ಅನುದಾನ | | | | | |
| 4 | ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ | | | | | |
| 5 | ಕೇಂದ್ರ ಹಣಕಾಸು ಆಯೋಗ ಅನುದಾನ | | | | | |
| 6 | ಗ್ರಾಮ ಪಂಚಾಯತಿಗಳ ಅನುದಾನ, ವಿದ್ಯುಚ್ಛಕ್ತಿ ಬಿಲ್ಲು ಪಾವತಿ | | | | | |
| 7 | ಮರಳು ಗಣಿಗಾರಿಕೆ (ರಾಜಾನುದಾನ ಪಾವತಿ) | | | | | |
| 8 | ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳಿಗೆ ಗೌರವಧನ ಪಾವತಿ | | | | | |
| 9 | ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ | | | | | |
| 10 | ಬಾವಿಗಳನ್ನು ತೋಡುವುದು ಹಾಗೂ ಆದ್ಯಗೊಳಿಸುವಿಕೆ ಹಾಗೂ ಕೆರೆಗಳ ಅಭಿವೃದ್ಧಿ | | | | | |
| 11 | ಗಂಗಾ ಕಲ್ಯಾಣ ಯೋಜನೆ | | | | | |
| 12 | ಸೋಲಾರ್ ಬೀದಿ ದೀಪಗಳು | | | | | |
| 13 | ಅನಿಲ ಯೋಜನೆ | | | | | |
| 14 | ವಸತಿ ಯೋಜನೆಗಳು | | | | | |
| 15 | ಜೀತದಾಳುಗಳ ಪುನರ್ವಸತಿ | | | | | |
| 16 | ಬೋರ್‌ವೆಲ್‌ಗಳ ನಿರ್ವಹಣೆ | | | | | |
| 17 | ಪಂಚಾಯತ್ ಯುವ ಕ್ರೀಡಾ ಖೇಲ್ ಅಭಿಯಾನ್ | | | | | |
| 18 | ಕಿರು ನೀರು ಸರಬರಾಜು ಯೋಜನೆ ನಿರ್ವಹಣೆ | | | | | |
| 19 | ಗ್ರಾಮ ಪಂಚಾಯತಿಗಳ ಸ್ವಂತ ಸಂಪನ್ಮೂಲದಿಂದ (OSR) | | | | | |
| 20 | ನಮ್ಮ ಗ್ರಾಮ ನಮ್ಮ ಯೋಜನೆ | | | | | |
| | ಒಟ್ಟು ಮೊತ್ತ | | | | | |

* ಕಡಿಮೆ ಪ್ರಗತಿಯಿದ್ದಲ್ಲಿ ಕಾರಣಗಳು.

## ಅನುಬಂಧ– I

ಗ್ರಾಮ ಪಂಚಾಯತಿ ಮಟ್ಟದ "ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳು (ಕೆ.ಡಿ.ಪಿ)" ಪ್ರಗತಿ ಪರಿಶೀಲನಾ ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳ ಪಟ್ಟಿ.

| ಕ್ರ.ಸಂ. | ಚರ್ಚಿಸಬೇಕಾದ ವಿಷಯಗಳು |
|---|---|
| 1) | ಕೃಷಿ :<br>a) ಬಿತ್ತನೆ ಬೀಜ ಮತ್ತು ರಸಗೊಬ್ಬರಗಳ ಪೂರೈಕೆ.<br>b) ಬೆಳೆ ಸಮೀಕ್ಷೆಗಳು.<br>c) ಬೆಳೆ ವಿಮೆಗಳು.<br>d) ಬೆಳೆ ಪರಿಹಾರಗಳ ವಿತರಣೆ.<br>e) ಸಬ್ಸಿಡಿ ಆಧಾರದಲ್ಲಿ ಕೃಷಿ ಸಲಕರಣೆಗಳು ಮತ್ತು ಯಂತ್ರೋಪಕರಣಗಳ ವಿತರಣೆ.<br>f) ಕೃಷಿ ಉತ್ಪಾದನೆಯಲ್ಲಿ ಹೆಚ್ಚಳಕ್ಕಾಗಿ ಹೊಸ ಪದ್ಧತಿಗಳು ಅಥವಾ ಆವಿಷ್ಕಾರಗಳ ಅಳವಡಿಕೆ.<br>g) ಹೊಸ ಬೆಳೆ ತಳಿಗಳ ವಿಧಾನಗಳ ಪರಿಚಯ.<br>h) ಕೃಷಿ ಮಾರುಕಟ್ಟೆ ವ್ಯವಸ್ಥೆ ಬಗ್ಗೆ ಮತ್ತು ಬೆಂಬಲ ಬೆಲೆ.<br>i) ಕೃಷಿ ದಾಸ್ತಾನು.<br>j) ಕ್ಷೇತ್ರ ಕೃಷಿ ಮಹೋತ್ಸವಗಳ ಆಯೋಜನೆ.<br>k) ಮಣ್ಣು ಪರೀಕ್ಷೆಗಳು.<br>l) ಕೃಷಿ ರೋಗಗಳು ಮತ್ತು ಔಷಧಿಗಳ ಬಳಕೆ.<br>m) ಕೃಷಿಯಲ್ಲಿ ತಂತ್ರಜ್ಞಾನಗಳ ಬಳಕೆ.<br>n) ಭೂಸಾರ ಸಂರಕ್ಷಣೆ. |
| 2) | ತೋಟಗಾರಿಕೆ:<br>a) ಭೂ ಸಾರ ಅಧಾರಿತ ತೋಟಗಾರಿಕೆ ಬೆಳೆಗಳ ಪರಿಚಯ<br>b) ತೋಟಗಾರಿಕೆ ಬೆಳೆಗಳ ಬೆಳೆಯುವ ವಿಧಾನಗಳು<br>c) ತೋಟಗಾರಿಕೆಯಲ್ಲಿ ಕಡಿಮೆ ನೀರಿನ ಬಳಕೆ<br>d) ಉತ್ಪಾದನೆಯಲ್ಲಿ ಹೆಚ್ಚಳಕ್ಕಾಗಿ ಅನುಸರಿಸಬೇಕಾದ ಮಾರ್ಗಗಳು<br>e) ಮಾರುಕಟ್ಟೆ ವ್ಯವಸ್ಥೆ<br>f) ದಾಸ್ತಾನು ವ್ಯವಸ್ಥೆ (ಶಿಥಿಲೀಕರಣ/ಸಾಮಾನ್ಯ ಉಗ್ರಾಣ)<br>g) ತೋಟಗಾರಿಕೆ ಮೇಳಗಳು/ವಾಣಿಜ್ಯ ಫಾರ್ಮ್‌ಗಳ ಆಯೋಜನೆ<br>h) ತೋಟಗಾರಿಕೆಯಲ್ಲಿ ರಾಸಾಯನಿಕ ಬಳಕೆ<br>i) ತೋಟಗಾರಿಕೆ ವಿಸ್ತರಣಾ ತರಬೇತಿಗಳ ಆಯೋಜನೆ |
| 3) | ರೇಷ್ಮೆ :<br>a) ನೂತನ ರೇಷ್ಮೆ ತಂತ್ರಜ್ಞಾನಗಳ ಅಳವಡಿಕೆ<br>b) ಹಿಪ್ಪು ನೇರಳೆ ಬೆಳೆಯುವಿಕೆಯಲ್ಲಿ ಹೊಸ ವಿಧಾನಗಳು.<br>c) ರೇಷ್ಮೆ ಮೊಟ್ಟೆ ಲಭಿಸುವಿಕೆ |

| | ಚರ್ಚಿಸಬೇಕಾದ ವಿಷಯಗಳು |
|---|---|
| | d) ರೇಷ್ಮೆ ಮರಿಗಳ ಸಾಕಾಣಿಕೆ ವಿಧಾನಗಳು<br>e) ರೇಷ್ಮೆ ಬಾಕಿ ಮನೆಗಳ ನಿರ್ಮಾಣಕ್ಕಾಗಿ ಸಹಾಯಧನ<br>f) ಮಾರುಕಟ್ಟೆ ವ್ಯವಸ್ಥೆ / ಬೆಂಬಲ ಬೆಲೆ<br>g) ರೇಷ್ಮೆಯನ್ನು ನೂಲುವ ವಿಧಾನಗಳು<br>h) ರೇಷ್ಮೆ ಬಟ್ಟೆಯನ್ನು ನೇಯ್ಯುವ ವಿಧಾನಗಳು |
| 4). | ಶಿಕ್ಷಣ : |
| | a) ಶಾಲಾ ಹಾಜರಾತಿ<br>b) ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಶಾಲೆಗೆ ಕರೆತರುವುದು<br>c) ಮಕ್ಕಳ ಶೈಕ್ಷಣಿಕ ಗುಣಮಟ್ಟ<br>d) ಕಲಿಕೆಯಲ್ಲಿ ಅಳವಡಿಸಿಕೊಳ್ಳಲಾದ ಹೊಸ ವಿಧಾನಗಳು<br>e) ಮಧ್ಯಾಹ್ನದ ಬಿಸಿಯೂಟ ಯೋಜನೆ ಅನುಷ್ಠಾನ<br>f) ಪೌಷ್ಟಿಕಾಂಶ ಕೊರತೆಯಿಂದ ಬಳಲುತ್ತಿರುವ ಮಕ್ಕಳ ಬಗ್ಗೆ<br>g) ಶಾಲೆಗಳಲ್ಲಿರುವ ಮೂಲಭೂತ ಸೌಕರ್ಯಗಳು<br>h) ಉಚಿತ ಸಮವಸ್ತ್ರ ಮತ್ತು ಬೈಸಿಕಲ್ಲುಗಳ ವಿತರಣೆ<br>i) ವಿದ್ಯಾರ್ಥಿ ವೇತನಗಳ ವಿತರಣೆ<br>j) ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ ಮತ್ತು ಬಳಕೆ<br>k) ಮಕ್ಕಳಲ್ಲಿ ನೈರ್ಮಲ್ಯ ಪದ್ಧತಿಗಳು/ಹವ್ಯಾಸಗಳನ್ನು ರೂಪಿಸುವುದು<br>l) ಶಾಲೆಗಳಲ್ಲಿ ರಾಷ್ಟ್ರೀಯ/ನಾಡ ಹಬ್ಬಗಳ ಆಚರಣೆ<br>m) SDMC ಸಮಿತಿಗಳ ಸಮರ್ಪಕ ಕಾರ್ಯನಿರ್ವಹಣೆ<br>n) ಮಕ್ಕಳ ಬೇಡಿಕೆಗಳು ರಚನೆ ಮತ್ತು ಪರಿಹಾರಗಳ ಬಗ್ಗೆ ಅನುಸರಿಸಲಾದ ಕ್ರಮಗಳು. |
| 5) | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ : |
| | a) ಮಹಿಳೆಯರ ಮತ್ತು ಮಕ್ಕಳ ಕಳ್ಳ ಸಾಗಾಣಿಕೆ ತಡೆಯುವಿಕೆ<br>b) ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳು<br>c) ಮಾಸಿಕ ಋತುಸ್ರಾವದ ಸಂದರ್ಭದಲ್ಲಿ ಮಹಿಳೆಯರನ್ನು ಮನೆಯಿಂದ/ ಊರಿನಿಂದ ದೂರವಿಡುವಂತಹ ಅನಿಷ್ಟ ಪದ್ಧತಿಗಳ ಹೋಗಲಾಡಿಸುವಿಕೆಯಲ್ಲಿ ಪ್ರಯತ್ನಗಳು.<br>d) ಗರ್ಭಿಣಿ ಮತ್ತು ಬಾಣಂತಿ ಮಹಿಳೆಯರ ಆರೈಕೆ, ಆರೋಗ್ಯ ಮತ್ತು ಪೌಷ್ಟಿಕಾಂಶಗಳ ನೀಡುವಿಕೆ.<br>e) ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಪೌಷ್ಟಿಕಾಂಶಯುಕ್ತ ಆಹಾರಗಳ ಸಮರ್ಪಕ ವಿತರಣೆ.<br>f) ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳ ಪೂರೈಕೆ ಹಾಗೂ ಪೂರೈಸಲಾದ ಆಹಾರ ಪದಾರ್ಥಗಳ ಗುಣಮಟ್ಟ ಖಾತ್ರೀಕರಣ.<br>g) ಮಕ್ಕಳಿಗೆ ವಯೋ ಸಹಜ ಲಸಿಕೆಗಳನ್ನು ನೀಡುವಿಕೆ.<br>h) ಮಹಿಳೆಯರು ಮತ್ತು ಮಕ್ಕಳಲ್ಲಿ ಶುಚಿತ್ವ ಕಾಪಾಡಲು ಅರಿವು ಕಾರ್ಯಕ್ರಮಗಳು.<br>i) ಅಂಗನವಾಡಿ ಕೇಂದ್ರಗಳ ಮೂಲಭೂತ ಸೌಕರ್ಯಗಳು. |
| 6) | ಪಶು ಸಂಗೋಪನೆ/ಹೈನುಗಾರಿಕೆ/ಕೋಳಿ & ಕುರಿ ಸಾಕಾಣಿಕೆ: |
| | a) ಜಾನುವಾರುಗಳಲ್ಲಿ ಕಂಡುಬರುವ ಸಾಂಕ್ರಾಮಿಕ ಮತ್ತು ಸೋಂಕು ರೋಗಗಳ ತಡೆಯುವಿಕೆಯಲ್ಲಿ ಅನುಸರಿಸಲಾದ ಕ್ರಮಗಳು. |

| ಕ್ರ.ಸಂ. | ಚರ್ಚಿಸಬೇಕಾದ ವಿಷಯಗಳು |
|---|---|
| | b) ಸಂಚಾರಿ ಚಿಕಿತ್ಸಾಲಯಗಳ ಕಾರ್ಯನಿರ್ವಹಣೆ<br>c) ಗುರುತಿಸಲಾದ ಮಾರಕ ಸಾಂಕ್ರಾಮಿಕ ರೋಗಗಳು.<br>d) ಪಶು ವೈದ್ಯ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳ ಬಗ್ಗೆ.<br>e) ಹೈನುಗಾರಿಕೆಯಲ್ಲಿ ಉತ್ಪಾದನೆ ಹೆಚ್ಚಿಸಲು ಉತ್ತಮ ತಳಿಗಳ ಆಯ್ಕೆ.<br>f) ರಾಸುಗಳಿಗೆ ವಿಮೆ ಮಾಡಿಸುವಿಕೆ.<br>g) ಹಾಲು ಉತ್ಪಾದನೆಯಲ್ಲಿ ಸಹಕಾರ ಸಂಘಗಳ ಒಗ್ಗೂಡಿಸುವಿಕೆ.<br>h) ಅಕಾಲಿಕ ಮರಣ ಹೊಂದಿದ ಜಾನುವಾರುಗಳಿಗೆ ಪರಿಹಾರ ಧನ ವಿತರಣೆ.<br>i) ವೀರ್ಯ ಬ್ಯಾಂಕ್‌ಗಳು. |
| 7) | ಮೀನುಗಾರಿಕೆ:<br>a) ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಕೆರೆ/ಜಲಾಶಯಗಳಲ್ಲಿ ಮೀನು ಮರಿಗಳನ್ನು ಬಿಡುವುದು, ಸಾಕಾಣಿಕೆ ಮತ್ತು ಮಾರಾಟ ಹರಾಜು ಪ್ರಕ್ರಿಯೆಗಳು.<br>b) ಒಳನಾಡಿನಲ್ಲಿ ಮೀನುಗಾರಿಕೆಯಲ್ಲಿ ಕಂಡುಬರುವ ಸಮಸ್ಯೆಗಳು.<br>c) ಖಾಸಗಿ ಮೀನು ಸಾಕಾಣಿಕೆಯಲ್ಲಿ ದೊರೆಯುವ ಸವಲತ್ತುಗಳು.<br>d) ಮಾರುಕಟ್ಟೆ ವ್ಯವಸ್ಥೆ. |
| 8) | ಸಾಮಾಜಿಕ ಅರಣ್ಯ:<br>a) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಮತ್ತು ಖರಾಬು ಭೂಮಿಗಳಲ್ಲಿ ಅರಣ್ಯಾಭಿವೃದ್ಧಿಗೆ ವಹಿಸಲಾದ ಕ್ರಮಗಳು.<br>b) ರಸ್ತೆಯ ಇಕ್ಕೆಲುಗಳು ಮತ್ತು ಸರ್ಕಾರಿ ಕಟ್ಟಡಗಳ ಆವರಣಗಳಲ್ಲಿ ಗಿಡ ನೆಡುವಿಕೆ.<br>c) ಸಸಿಗಳ ಸುಲಭ ಲಭಿಸುವಿಕೆ ವಿಧಾನಗಳು.<br>d) ನೆಡುತೋಪುಗಳ ನಿರ್ವಹಣೆ.<br>e) ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಸಾಮಾಜಿಕ ಅರಣ್ಯ ಹಾಗೂ ದಟ್ಟಾರಣ್ಯಗಳ ಸಂರಕ್ಷಣೆಯಲ್ಲಿರುವ ಅಡಚಣೆಗಳು.<br>f) ಜೀವ ವೈವಿಧ್ಯತಾ ನಿರ್ವಹಣಾ ಸಮಿತಿಯ ರಚನೆ ಮತ್ತು ಕಾರ್ಯನಿರ್ವಹಣೆ.<br>g) ಅಮೂಲ್ಯವಾದ ಔಷಧೀಯ ಸಸ್ಯ ಸಂಪತ್ತು ಮತ್ತು ಪ್ರಾಣಿ ಸಂಪತ್ತುಗಳ ಸಂರಕ್ಷಣೆಯಲ್ಲಿ ವಹಿಸಲಾದ ಕ್ರಮಗಳು.<br>h) ಗ್ರಾಮ ಪಂಚಾಯತಿಯಲ್ಲಿ ಬರುವ ಅರಣ್ಯಾಧಿಕಾರಿ ಪ್ರದೇಶದ ಭೌಗೋಳಿಕ ವಿಸ್ತೀರ್ಣದ ಅಂದಾಜಿಸುವಿಕೆ. |
| 9) | ಸಣ್ಣ ನೀರಾವರಿ:<br>a) ಕೆರೆಗಳ ಹೂಳೆತ್ತುವುದು/ಕೆರೆಗಳ ಒಡು ದುರಸ್ತಿ/ಫೀಡರ್ ಚಾನೆಲ್‌ಗಳ ದುರಸ್ತಿ/ಇತರೆ.<br>b) ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆರೆಗಳ ಅಂಕಿ-ಅಂಶಗಳು. (Catchment area/ಸಂಗ್ರಹಣಾ ಸಾಮರ್ಥ್ಯ/ಇತರ) |
| 10) | ಗ್ರಾಮೀಣ ರಸ್ತೆಗಳು, ಸೇತುವೆಗಳು & ಇತರೆ ಸಂಪರ್ಕ ಮಾರ್ಗಗಳು:<br>a) ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ರಸ್ತೆಗಳು, ಸೇತುವೆಗಳು & ಇತರೆ ಸಂಪರ್ಕ ಮಾರ್ಗಗಳ ಅಂಕಿ-ಅಂಶಗಳು (ದೂರ/ಸಂಖ್ಯೆಗಳು/ಇತ್ಯಾದಿ)<br>b) ದುರಸ್ಥಿ ಮತ್ತು ಹೊಸ ನಿರ್ಮಾಣ ವಿವರಣೆಗಳು.<br>c) ಇತರೆ ಯಾವುದೇ ಹೊಸ ಯೋಜನೆಗಳ ಅನುಷ್ಠಾನದ ಸಂಬಂಧದಲ್ಲಿ ಮಾಹಿತಿ |

| | ಚರ್ಚಿಸಬೇಕಾದ ವಿಷಯಗಳು |
|---|---|
| | ಒದಗಿಸುವಿಕೆ. |
| 11) | ಗ್ರಾಮೀಣ ವಿದ್ಯುದೀಕರಣ/ವಿದ್ಯುಚ್ಛಕ್ತಿ ಮತ್ತು ಇಂಧನ:<br>a) ವಿದ್ಯುತ್ ಪೂರೈಕೆಯಲ್ಲಿ ಅಡಚಣೆಗಳು/ವ್ಯತ್ಯಯಗಳು ಕಾರಣಗಳು ಮತ್ತು ಪರಿಹಾರ ಕ್ರಮಗಳು.<br>b) ಸಾಂಪ್ರದಾಯಿಕ ಮತ್ತು ಸಾಂಪ್ರದಾಯಿಕವಲ್ಲದ ಇಂಧನಗಳ ಉತ್ಪಾದನೆಗೆ ಉತ್ತೇಜನ.<br>c) ವಿದ್ಯುತ್ ಪೂರೈಕೆಯ ವೇಳಾಪಟ್ಟಿಗಳ ಸ್ಥಾಪಿಸುವಿಕೆಗಳು.<br>d) ಹೊಸ ಇಂಧನ ಘಟಕಗಳ ಸ್ಥಾಪಿಸುವಿಕೆಗಳು. |
| 12) | ಸಾರ್ವಜನಿಕ ವಿತರಣಾ ವ್ಯವಸ್ಥೆ:<br>a) ನ್ಯಾಯ ಬೆಲೆ ಅಂಗಡಿಗಳ ಸಮರ್ಪಕ ಕಾರ್ಯನಿರ್ವಹಣೆ.<br>b) ವಿತರಣಾ ವ್ಯವಸ್ಥೆಯಲ್ಲಿ ಬಯೋಮೆಟ್ರಿಕ್ ವಿಧಾನಗಳ ಅಳವಡಿಕೆ.<br>c) ಆಹಾರ ಪದಾರ್ಥಗಳ ಗುಣಮಟ್ಟ ಖಾತ್ರಿ ಪಡಿಸುವಿಕೆ.<br>d) ತೂಕದಲ್ಲಿ ಕ್ರಮಬದ್ಧ ವಿಧಾನಗಳ ಅನುಸರಿಸುವಿಕೆ. |
| 13) | ಗ್ರಂಥಾಲಯಗಳು:<br>a) ಗ್ರಂಥಾಲಯ ಕಟ್ಟಡಗಳು ಇರುವಿಕೆ/ ಕಾರ್ಯಾಚರಣೆ ಮಾಡುವಿಕೆ/ಮೂಲಭೂತ ಸೌಲಭ್ಯಗಳು ಇರುವಿಕೆಯನ್ನು ಖಾತ್ರಿ ಪಡಿಸುವುದು.<br>b) ಗ್ರಂಥಾಲಯಗಳಿಗೆ ನಿಗಧಿತವಾಗಿ ದಿನಪತ್ರಿಕೆಗಳು/ಮಾಸ ಪತ್ರಿಕೆಗಳು/ಗ್ರಂಥಗಳು ಸರಬರಾಜು ಆಗುತ್ತಿರುವ ಬಗ್ಗೆ.<br>c) ಗ್ರಾಮಗಳಲ್ಲಿನ ಜನರಲ್ಲಿ ಓದುವ ಹವ್ಯಾಸವನ್ನು ಉತ್ತೇಜಿಸಲು ಅನುಸರಿಸಲಾದ ಕ್ರಮಗಳು. |
| 14) | ಸಾರ್ವಜನಿಕ ಆರೋಗ್ಯ:<br>a) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸ್ಥಾಪಿತವಾಗಿರುವ ಸಮುದಾಯ ಆರೋಗ್ಯ ಕೇಂದ್ರಗಳು/ಪ್ರಾಥಮಿಕ ಆರೋಗ್ಯ ಕೇಂದ್ರಗಳು/ ವಿಸ್ತರಣಾ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರು ಹಾಗೂ ಇತರೆ ಪೂರಕ ಸಿಬ್ಬಂದಿಗಳ ಕುರಿತು ಮಾಹಿತಿ ಒದಗಿಸುವಿಕೆ.<br>b) ಆರೋಗ್ಯ ಕೇಂದ್ರಗಳಲ್ಲಿ ದಾಖಲಾಗುತ್ತಿರುವ ರೋಗಿಗಳ ಅಂಕಿ ಸಂಖ್ಯೆಗಳು.<br>c) ಆರೋಗ್ಯ ಕೇಂದ್ರಗಳಲ್ಲಿರುವ ಮೂಲಭೂತ ಸೌಲಭ್ಯಗಳು.<br>d) ಆರೋಗ್ಯ ಕೇಂದ್ರಗಳಲ್ಲಿರುವ ಮೂಲಭೂತ ಸೌಲಭ್ಯಗಳು ಹಾಗೂ ಎದುರಿಸುತ್ತಿರುವ ಕೊರತೆಗಳು.<br>e) ವೈದ್ಯಕೀಯ ಸಲಕರಣೆಗಳು/ಸಾಮಗ್ರಿಗಳು ಮತ್ತು ಔಷಧಿಗಳ ಸಮರ್ಪಕ ಪೂರೈಕೆಯಲ್ಲಿರುವ ಸ್ಥಿತಿಗತಿಗಳು.<br>f) ಸಾಂಕ್ರಾಮಿಕ ರೋಗ ನಿರ್ವಹಣಾ ವ್ಯವಸ್ಥೆಗಳ ಅಳವಡಿಸಿಕೊಳ್ಳುವಿಕೆ.<br>g) ಮಹಿಳೆ ಮತ್ತು ಮಕ್ಕಳಿಗೆ ವಯೋ ಸಹಜ ಲಸಿಕೆಗಳ ಹಾಕಿಸುವಿಕೆ.<br>h) ಇತರೆ ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸಾಧಿಸಲಾದ ಪ್ರಗತಿ. |
| 15) | ಸಮಾಜ ಕಲ್ಯಾಣ :<br>a) ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳೊಂದಿಗೆ ತಾರತಮ್ಯ ಆಚರಣೆಗಳು ಇಲ್ಲದಿರುವಿಕೆಯನ್ನು ಖಾತ್ರಿ ಪಡಿಸುವುದು.<br>b) ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಮೇಲಿನ |